

# ಸಮಯದ ಹಿಂದೆ ಸವಾರಿ

ಕಾಲ ಅನ್ನುವುದು ಬೊಗಸೆಯೊಳಗಿನಿಂದ ಹನಿಹನಿಯಾಗಿ ಸೋರಿಹೋಗುತ್ತಿರುವ ನೀರಿನ ಹಾಗೆ. ಮಣ್ಣಿಗೆ ಬಿದ್ದ ನೀರನ್ನು ಮತ್ತೆ ಹೆಕ್ಕಿ ತೆಗೆಯಲು ಸಾಧ್ಯವಿಲ್ಲ. ಭೂತಕಾಲವನ್ನು ಮರುಸೃಷ್ಟಿಸಲು ಸಾಧ್ಯವಿಲ್ಲ. ಆದರೆ ಭೂತಕಾಲಕ್ಕೆ ಕೊಡುವ ಮರುಭೇಟಿಯಿಂದ ವರ್ತಮಾನವನ್ನು ಇನ್ನಷ್ಟು ಸಹ್ಯವಾಗಿಸಿಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಸಂಕೀರ್ಣವಾಗಿ ಎದುರಿಸುತ್ತದೆ ಈ ಕಿರುಚಿತ್ರ.

■ ಗೌರಿ

‘ಈ ಕಾಲವನ್ನು ಒಂದಿಷ್ಟು ವರ್ಷ ಹಿಂದಕ್ಕೆ ತೆಗೆದುಕೊಂಡು ಹೋಗುತ್ತೇವೆ. ಆಗ ನೀವು ಈಗ ಬದುಕುತ್ತಿರುವ ಬದುಕನ್ನೇ ಮತ್ತೆ ಆಯ್ದುಕೊಳ್ಳುತ್ತೀರಾ?’ ಈ ಪ್ರಶ್ನೆಗೆ ಬಹುತೇಕರ ಉತ್ತರ ‘ಇಲ್ಲ’ ಎಂದೇ ಆಗಿರುತ್ತದೆ. ಯಾಕೆಂದರೆ ‘ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿಯುವುದೇ’ ಮನುಷ್ಯನ ಮೂಲಭೂತ ಗುಣ. ಹಾಗಾಗಿ ಮನುಷ್ಯ ಸದಾ ಹಳವಂಡಗಳನ್ನು ಬೆನ್ನಿಗೆ ಕಟ್ಟಿಕೊಂಡೇ ಅಡ್ಡಾಡುತ್ತಿರುತ್ತಾನೆ. ತನ್ನ ಇಂದಿನ ದುಃಸ್ಥಿತಿಗೆ ಭೂತಕಾಲದಲ್ಲಿ ಕಾರಣಗಳನ್ನು ಹುಡುಕುತ್ತಾ, ‘ಅವತ್ತು ಹಾಗಾಗದಿದ್ದರೆ ನನ್ನ ಈಗಿನ ಬದುಕು ಬೇರೆ ಥರ ಇರುತ್ತಿತ್ತು’ ಎಂದು ಅಲವತ್ತುಕೊಳ್ಳುತ್ತಲೇ ಇರುತ್ತಾನೆ.

ಆದರೆ ನಿಜವಾಗಿಯೂ ನಮ್ಮ ಇಂದಿನ ವರ್ತಮಾನವನ್ನು ಬದಲಿಸುವಂಥ ಆಯ್ಕೆಯೊಂದು ಭೂತಕಾಲದಲ್ಲಿ ಇತ್ತಾ? ಅಥವಾ ನಮ್ಮ ವರ್ತಮಾನದಿಂದ ನಾವು ಪಲಾಯನಗೊಳ್ಳಲು, ನಮ್ಮ ಹತಾಶೆಗೆ ಇಂಬು ಕೊಟ್ಟುಕೊಳ್ಳಲು ಭೂತಕಾಲದಲ್ಲಿ ಅಡಗುತಾಣಗಳನ್ನು ಹುಡುಕುತ್ತಿರುತ್ತೇವೆಯಾ?

‘ಸೆವೆನ್ ಥಿಂಗ್ಸ್ ಐ ಹ್ಯಾವ್ ಲರ್ನ್ಡ್ ಅಬೌಟ್ ಟೈಮ್ ಟ್ರಾವೆಲ್’ ಕಿರುಚಿತ್ರ ನೇರವಾಗಿ ಈ ಯಾವ ಪ್ರಶ್ನೆಗಳನ್ನೂ ಎತ್ತಿಕೊಳ್ಳುವುದಿಲ್ಲ. ಆದರೆ ಓರ್ವ ಪರಮಮುಗ್ಧ ಬಾಲಕನ ಮೂಲಕ ನಮ್ಮ ಮನಸ್ಸಲ್ಲಿ ಇಂಥ ಹಲವು ಪ್ರಶ್ನೆಗಳನ್ನು ಎಬ್ಬಿಸುವ ಶಕ್ತಿ ಇದಕ್ಕಿದೆ.

ಸುಮಾರು ಎಂಟು ವರ್ಷದ ಬಾಲಕ ಅವನ ವರ್ತಮಾನದಿಂದ ತಪ್ಪಿಸಿಕೊಳ್ಳುವ ಯತ್ನದಲ್ಲಿ ಟೈಮ್ ಮಷಿನ್ ಕಂಡುಹಿಡಿಯುತ್ತಾನೆ. ಅವನ ತಾಯಿ ಡಿಪ್ರೆಶನ್‌ಗೆ ಒಳಗಾಗಿ ಮಲಗಿದ್ದಾಳೆ. ಮನೆಯಲ್ಲಿ ಮತ್ತ್ಯಾರೂ ಇಲ್ಲ. ಸ್ಮಶಾನದಂತಿರುವ ಈ ವರ್ತಮಾನದಿಂದ ಟೈಮ್ ಮಷಿನ್ ಮೂಲಕ ತಪ್ಪಿಸಿಕೊಳ್ಳುವ ಯತ್ನದಲ್ಲಿ ಅವನು ಹಲವು ಸಂಗತಿಗಳನ್ನು ಕಲಿತುಕೊಳ್ಳುತ್ತಾನೆ.

ಪೂರ್ತಿ ಫ್ಯಾಂಟಸಿಯೂ ಅಲ್ಲದ ಪೂರ್ತಿ ವಾಸ್ತವವೂ ಅಲ್ಲದ ವಿಚಿತ್ರ ಹದದಲ್ಲಿ ಈ ಕಿರುಚಿತ್ರ ರೂಪುಗೊಂಡಿದೆ. ಟೈಮ್ ಟ್ರಾವೆಲ್ ಪ್ರಯತ್ನದಲ್ಲಿ ತಾನು ಕಲಿತು ಏಳು ಪಾಠಗಳನ್ನು ನಿಮಗೆ ಹೇಳುತ್ತೇನೆ ಎಂಬ ಹಿನ್ನೆಲೆ ಧ್ವನಿಯೊಂದಿಗೆ ಸಿನಿಮಾ ಆರಂಭವಾಗುತ್ತದೆ. ಅವನು ಹೇಳುವ ಆ ಪಾಠಗಳು ತುಂಬ ಸರಳವೂ ಮಗುಸಹಜ ಮುಗ್ಧವೂ ಆಗಿ ಕಾಣುವಂತೆಯೇ ಬದುಕಿನ ಗಹನ ಸತ್ಯಗಳನ್ನೂ ಆಳದಲ್ಲಿ ಅಡಗಿಸಿಕೊಂಡಿವೆ.

ನಮ್ಮ ಭೂತಕಾಲದ ಮರುಕಳಿಕೆಯಿಂದ ವರ್ತಮಾನವನ್ನೇನೂ ಬದಲಾಯಿಸುವುದು ಸಾಧ್ಯವಿಲ್ಲ. ಆದರೆ ಭವಿಷ್ಯದ ಸಾಧ್ಯತೆಗಳನ್ನು ಇನ್ನಷ್ಟು ಸಮೃದ್ಧಗೊಳಿಸಿಕೊಳ್ಳಲು ಸಾಧ್ಯವಿರುತ್ತದೇನೋ ಎಂಬ ಅನುಮಾನವನ್ನಷ್ಟೇ ಬಲುಸೂಕ್ಷ್ಮವಾಗಿ ಈ ಕಿರುಚಿತ್ರ ಹೇಳುತ್ತದೆ.

ಎಂಟು ವರ್ಷದ ಮಗುವಿನಿಂದ ಇಡೀ ಚಿತ್ರಕ್ಕೆ ಒಂದು ಮುಗ್ಧ ಆವರಣ ಸಿಕ್ಕಿದೆ. ಆ ಆವರಣಕ್ಕೆ ಡೆಪ್ತ್ ಕೊಡುವುದು ಹಿನ್ನೆಲೆ ಸಂಗೀತ. ಸರಕ್ಕನೇ ಮನಸ್ಸನ್ನು ಹಿಡಿದೆಳೆದು ನಡುಗಿಸುವ ಶಕ್ತಿ ಈ ಚಿತ್ರದ ಹಿನ್ನೆಲೆ ಸಂಗೀತಕ್ಕಿದೆ. ಚಿತ್ರದ ಅಮೂರ್ತ ಭಿತ್ತಿಗೆ ಪೂರಕವಾಗುವ ಹಾಗೆ ಛಾಯಾಗ್ರಹಣವೂ ಒದಗಿಬಂದಿದೆ.

ಒಂದೇ ನೋಟಕ್ಕೆ, ಒಂದೇ ವ್ಯಾಖ್ಯಾನಕ್ಕೆ ಸಿಗದ ಕಾವ್ಯದಂತಿರುವ ಈ ಕಿರುಚಿತ್ರ ಮರು ನೋಟಕ್ಕೆ ಹೊಸ ಹೊಸ ಬಗೆಯ ಆಯಾಮಗಳನ್ನು ಹೊಳೆಯಿಸುತ್ತ ಹೋಗುತ್ತದೆ. ಒಂದು ಕೃತಿಯ ಯಶಸ್ಸು ಗುರ್ತಿಸಲು ಇದಕ್ಕಿಂತ ಇನ್ನೇನು ಬೇಕು?



**ಹೆಸರು:** ಸೆವೆನ್ ಥಿಂಗ್ಸ್ ಐ ಹ್ಯಾವ್ ಲರ್ನ್ಡ್ ಅಬೌಟ್ ಟೈಮ್ ಟ್ರಾವೆಲ್
**ನಿರ್ದೇಶಕ:** ಜೋನಾಥನ್ ಹರ್ಜ್‌ಬರ್ಗ್
**ನಿರ್ಮಾಣ:** ರಿವೋಲ್ವರ್ ಫಿಲ್ಮ್
**ಛಾಯಾಗ್ರಹಣ:** ಟಿಮ್ ಕೆರ್ಬೋಸ್ಟ್
**ಸಂಕಲನ:** ರೂಬೆನ್ ವ್ಯಾನ್ ಡೆರ್ ಹಮ್ಮೆನ್
**ಧ್ವನಿ ವಿನ್ಯಾಸ:** ಲೆನ್ನೆರ್ಟ್ ಹನ್‌ಫೆಲ್ಡ್
**ಸಂಗೀತ:** ಮೈಖೆಲ್ ಜೆಲ್ಮೆರ್

ಈ ಕಿರುಚಿತ್ರ ವೀಕ್ಷಣೆಗೆ bit.ly/37Txpnv ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.